## ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 31.01.2018ರಂದು ಪೂರ್ವಾಹ್ಣ ಗಂಟೆ 11.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ಮೊದಲ ಸಾಮಾನ್ಯ ಸಭೆಯ ಮುಂದುವರಿದ ಸಭೆ ದಿನಾಂಕ 20.02.2018 ಅಪರಾಹ್ನ 2.30ರ ಸಾಮಾನ್ಯ ಸಭೆಯ ನಡಾವಳಿಗಳು.**

ಉಪಸ್ಥಿತ ಸದಸ್ಯರು:

| | | |
|---|---|---|
| 1. | **ಪ್ರೊ. ಕೆ. ಭೈರಪ್ಪ**<br>ಕುಲಪತಿಗಳು<br>ಮಂಗಳೂರು ವಿಶ್ವವಿದ್ಯಾನಿಲಯ,<br>ಮಂಗಳಗಂಗೋತ್ರಿ–574 199. | ಅಧ್ಯಕ್ಷರು |
| 2 | **ಡಾ. ಜೆ. ಈಶ್ವರ್ ಭಟ್**<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ<br>ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ<br>ಮಂಗಳೂರು ವಿಶ್ವವಿದ್ಯಾನಿಲಯ<br>ಮಂಗಳಗಂಗೋತ್ರಿ–574 199. | ಸದಸ್ಯರು |
| 3 | **ಶ್ರೀ ಸತ್ಯನಾರಾಯಣ ಭಟ್**<br>ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ<br>ಸಿದ್ಧಕಟ್ಟೆ, ಬಂಟ್ವಾಳ – **574 237** | – " – |
| 4 | **ಪ್ರೊ.ಬಿ.ರಹಮತ್ ಅಲಿ**<br>ಪ್ರಾಂಶುಪಾಲರು, ಬದ್ರಿಯಾ ಪ್ರಥಮ ದರ್ಜೆ ಕಾಲೇಜು<br>**ಕಂದಕ, ಮಂಗಳೂರು – 575 001.** | – " – |
| 5 | **ಡಾ. ಗಣಪತಿ ಭಟ್**<br>ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು<br>**ಪುಂಜಾಲಕಟ್ಟೆ – 574 233** | – " – |
| 6 | **ಡಾ. ಯು. ತಾರಾ ರಾವ್**<br>ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು<br>**ಕಾವೂರು, ಮಂಗಳೂರು – 575 015** | – " – |
| 7 | **ಡಾ. ಕೆ. ಸುಂದರ ನಾಯಕ್,** ಐಎಫ್ಎಸ್ (ನಿ),<br>ಇ–105, 7ನೇ ಎ ಅಡ್ಡ ರಸ್ತೆ,<br>ಮಾನ್ಯತಾ ರೆಸಿಡೆನ್ಸಿ, ರಾಚೇನಹಳ್ಳಿ ಗ್ರಾಮ,<br>ಕೆ. ಆರ್. ಪುರಂ ಹೋಬಳಿ,<br>ನಾಗಾವರ ಕೆರೆ ಹತ್ತಿರ, **ಬೆಂಗಳೂರು – 560 045.** | – " – |
| 8 | **ಡಾ. ಪುಷ್ಪ ಕುಟ್ಟಣ್ಣ,**<br>ಹೊಸಕೇರಿ ಗ್ರಾಮ, ಅರೆಕಾಡು ಅಂಚೆ,<br>ವಯ ಸಿದ್ಧಾಪುರ, **ಕೊಡಗು ಜಿಲ್ಲೆ – 571 253** | – " – |
| 9 | **ಶ್ರೀ ಎಂ. ಪಿ. ನೊರೋನ್ಹಾ, ವಕೀಲರು**<br>ಕುಲಶೇಖರ, ಹೊಲಿಕ್ರಾಸ್ ಚರ್ಚ್ ಹಿಂಭಾಗ,<br>**ಮಂಗಳೂರು – 575 005** | – " – |
| 10 | **ಶ್ರೀ ಕೆ. ಪ್ರಸನ್ನ ಕುಮಾರ್ ರೈ,**<br>ಪ್ರತೀಕ್ಷಾ, ಆರ್ಯಾಪು, ಪುತ್ತೂರು<br>**ದಕ್ಷಿಣ ಕನ್ನಡ 574 210** | – " – |
| 11 | **ಶ್ರೀ ಕೆ. ಮೋಹನಚಂದ್ರನ್ ನಂಬಿಯಾರ್**<br>ನಂದನಂ, 1ನೇ ಅಡ್ಡರಸ್ತೆ, ಎರಡನೇ ಸ್ಟೇಜ್, ಆನಂದನಗರ,<br>**ಮಣಿಪಾಲ, ಉಡುಪಿ – 576 104** | – " – |

12 ಪ್ರಾಂಶುಪಾಲರು — " —
ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ
ದಕ್ಷಿಣ ಕನ್ನಡ, ಮಂಗಳೂರು 575001.
(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ)

13 ಪ್ರೊ. ಎ. ಎಂ. ಖಾನ್ — " —
ಕುಲಸಚಿವರು (ಪರೀಕ್ಷಾಂಗ)
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574 199.

14 ಪ್ರೊ. ಬಿ.ಎಸ್.ನಾಗೇಂದ್ರ ಪ್ರಕಾಶ್ — " —
ಕುಲಸಚಿವರು (ಆಡಳಿತ)
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574 199.

ವಿಶೇಷ ಆಹ್ವಾನಿತರು:

1 ಡಾ.ದಯಾನಂದ ನಾಯ್ಕ್
ಹಣಕಾಸು ಅಧಿಕಾರಿ (ಪ್ರಭಾರ)
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574 199.

ಅನುಪಸ್ಥಿತ ಸದಸ್ಯರು:

1 ಜಂಟಿ ನಿರ್ದೇಶಕರು ಸದಸ್ಯರು
ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಮಂಗಳೂರು
(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ)

2 ತಾಂತ್ರಿಕ ಶಿಕ್ಷಣ ನಿರ್ದೇಶಕರು
ಕರ್ನಾಟಕ ರಾಜ್ಯ
ಅರಮನೆ ರಸ್ತೆ, ಬೆಂಗಳೂರು – 560 001.

3 ಶ್ರೀ ಹರೀಶ್ ಆಚಾರ್, — " —
"ಶ್ರೀ ಹರಿ" ನಿವಾಸ, ಮಜಲು
ನಾಗುರಿ, ಕಂಕನಾಡಿ –575 002 ಮಂಗಳೂರು.

4 ಶ್ರೀ ಅಶೋಕ್ ಕುಮಾರ್ ರೈ, — " —
"ಅನುರಾಗ್", ಡಿ.ನಂ.2–30–2484/1,
ಕಾಸ್ಮಸ್ ಲೇನ್, ಕದ್ರಿ ಕಂಬ್ಳ, ಮಂಗಳೂರು

5 ಶ್ರೀ ವಿಜಯಕುಮಾರ್ ಸೊರಕೆ, — " —
ಕುಮಾರಧಾರಾ ಫಾರ್ಮ್, ಕಾಪಿನಕಾಡು
ಚಾರ್ವಾಕ – 574328, ಪುತ್ತೂರು, ದಕ್ಷಿಣ ಕನ್ನಡ

6 ವೈದ್ಯಕೀಯ ಶಿಕ್ಷಣ ನಿರ್ದೇಶಕರು — " —
ಕರ್ನಾಟಕ ರಾಜ್ಯ, ಆನಂದರಾವ್ ವೃತ್ತ
ಬೆಂಗಳೂರು – 560 009.

7 ನಿರ್ದೇಶಕರು — " —
ಪದವಿ ಪೂರ್ವ ಶಿಕ್ಷಣ ಇಲಾಖೆ
ಪದವಿ ಪೂರ್ವ ಶಿಕ್ಷಣ ಭವನ,
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ
ಮಲ್ಲೇಶ್ವರಂ, ಬೆಂಗಳೂರು 560 003.

*********

## ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 31.01.2018ರಂದು ಪೂರ್ವಾಹ್ನ ಗಂಟೆ 11.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ಮೊದಲ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು:**

| | | |
|---|---|---|
| 1. | **ಪ್ರೊ. ಕೆ. ಭೈರಪ್ಪ**<br>ಕುಲಪತಿಗಳು<br>ಮಂಗಳೂರು ವಿಶ್ವವಿದ್ಯಾನಿಲಯ,<br>**ಮಂಗಳಗಂಗೋತ್ರಿ–574 199.** | ಅಧ್ಯಕ್ಷರು |
| 2. | **ಜಂಟಿ ನಿರ್ದೇಶಕರು**<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಮಂಗಳೂರು<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 3. | **ಡಾ. ಜೆ. ಈಶ್ವರ್ ಭಟ್**<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ<br>ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ<br>ಮಂಗಳೂರು ವಿಶ್ವವಿದ್ಯಾನಿಲಯ<br>**ಮಂಗಳಗಂಗೋತ್ರಿ–574 199.** | – " – |
| 4 | **ಶ್ರೀ ಹರೀಶ್ ಆಚಾರ್,**<br>"ಶ್ರೀ ಹರಿ" ನಿವಾಸ, ಮಜಲು<br>ನಾಗುರಿ, ಕಂಕನಾಡಿ –575 002 ಮಂಗಳೂರು. | – " – |
| 5 | **ಶ್ರೀ ಅಶೋಕ್ ಕುಮಾರ್ ರೈ,**<br>"ಅನುರಾಗ್", ಡಿ.ನಂ.2–30–2484/1,<br>ಕಾಸ್ಮಸ್ ಲೇನ್, ಕದ್ರಿ ಕಂಬ್ಳ, ಮಂಗಳೂರು | – " – |
| 6 | **ಶ್ರೀ ಸತ್ಯನಾರಾಯಣ ಭಟ್**<br>ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ<br>ಸಿದ್ಧಕಟ್ಟೆ, ಬಂಟ್ವಾಳ – **574 237** | – " – |
| 7. | **ಪ್ರೊ.ಬಿ.ರಹಮತ್ ಆಲಿ**<br>ಪ್ರಾಂಶುಪಾಲರು, ಬದ್ರಿಯಾ ಪ್ರಥಮ ದರ್ಜೆ ಕಾಲೇಜು<br>**ಕಂದಕ, ಮಂಗಳೂರು – 575 001.** | – " – |
| 8 | **ಡಾ. ಗಣಪತಿ ಭಟ್**<br>ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು<br>**ಪುಂಜಾಲಕಟ್ಟೆ – 574 233** | – " – |
| 9 | **ಡಾ. ಯು. ತಾರಾ ರಾವ್**<br>ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು<br>**ಕಾವೂರು, ಮಂಗಳೂರು – 575 015** | – " – |
| 10 | **ಡಾ. ಕೆ. ಸುಂದರ ನಾಯಕ್,** ಐಎಫ್ಎಸ್ (ನಿ),<br>ಇ–105, 7ನೇ ಎ ಅಡ್ಡ ರಸ್ತೆ,<br>ಮಾನ್ಯತಾ ರೆಸಿಡೆನ್ಸಿ, ರಾಚೇನಹಳ್ಳಿ ಗ್ರಾಮ,<br>ಕೆ. ಆರ್. ಪುರಂ ಹೋಬಳಿ,<br>ನಾಗಾವರ ಕೆರೆ ಹತ್ತಿರ, **ಬೆಂಗಳೂರು – 560 045.** | – " – |
| 11 | **ಶ್ರೀ ವಿಜಯಕುಮಾರ್ ಸೊರಕೆ,**<br>ಕುಮಾರಧಾರಾ ಫಾರ್ಮ್, ಕಾಪಿನಕಾಡು<br>ಚಾರ್ವಾಕ – 574328, **ಪುತ್ತೂರು, ದಕ್ಷಿಣ ಕನ್ನಡ** | – " – |
| 12 | **ಡಾ. ಪುಷ್ಪ ಕುಟ್ಟಣ್ಣ,**<br>ಹೊಸಕೇರಿ ಗ್ರಾಮ, ಅರೆಕಾಡು ಅಂಚೆ,<br>ವಯ ಸಿದ್ದಾಪುರ, **ಕೊಡಗು ಜಿಲ್ಲೆ – 571 253** | – " – |

13 ಶ್ರೀ ಎಂ. ಪಿ. ನೊರೋನ್ಹಾ, ವಕೀಲರು — " —
ಕುಲಶೇಖರ, ಹೊಲಿಕ್ರಾಸ್ ಚರ್ಚ್ ಹಿಂಭಾಗ,
ಮಂಗಳೂರು – 575 005

14 ಶ್ರೀ ಕೆ. ಪ್ರಸನ್ನ ಕುಮಾರ್ ರೈ, — " —
ಪ್ರತೀಕ್ಷಾ, ಆರ್ಯಾಪು, ಪುತ್ತೂರು
ದಕ್ಷಿಣ ಕನ್ನಡ 574 210

15 ಶ್ರೀ ಕೆ. ಮೋಹನಚಂದ್ರನ್ ನಂಬಿಯಾರ್ — " —
ನಂದನಂ, 1ನೇ ಅಡ್ಡರಸ್ತೆ, ಎರಡನೇ ಸ್ಟೇಜ್, ಆನಂದನಗರ,
ಮಣಿಪಾಲ, ಉಡುಪಿ – 576 104

16 ಪ್ರಾಂಶುಪಾಲರು — " —
ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ
ದಕ್ಷಿಣ ಕನ್ನಡ, ಮಂಗಳೂರು 575001.
(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ)

17 ಪ್ರೊ. ಎ. ಎಂ. ಖಾನ್ — " —
ಕುಲಸಚಿವರು (ಪರೀಕ್ಷಾಂಗ)
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574 199.

18 ಪ್ರೊ. ಬಿ.ಎಸ್.ನಾಗೇಂದ್ರ ಪ್ರಕಾಶ್ — " —
ಕುಲಸಚಿವರು (ಆಡಳಿತ)
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574 199.

ವಿಶೇಷ ಆಹ್ವಾನಿತರು:

ಡಾ.ದಯಾನಂದ ನಾಯ್ಕ್
ಹಣಕಾಸು ಅಧಿಕಾರಿ (ಪ್ರಭಾರ)
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574 199.

ಅನುಪಸ್ಥಿತ ಸದಸ್ಯರು:

1 ತಾಂತ್ರಿಕ ಶಿಕ್ಷಣ ನಿರ್ದೇಶಕರು ಸದಸ್ಯರು
ಕರ್ನಾಟಕ ರಾಜ್ಯ
ಅರಮನೆ ರಸ್ತೆ, ಬೆಂಗಳೂರು – 560 001.

2 ವೈದ್ಯಕೀಯ ಶಿಕ್ಷಣ ನಿರ್ದೇಶಕರು — " —
ಕರ್ನಾಟಕ ರಾಜ್ಯ, ಆನಂದರಾವ್ ವೃತ್ತ
ಬೆಂಗಳೂರು – 560 009.

3 ನಿರ್ದೇಶಕರು — " —
ಪದವಿ ಪೂರ್ವ ಶಿಕ್ಷಣ ಇಲಾಖೆ
ಪದವಿ ಪೂರ್ವ ಶಿಕ್ಷಣ ಭವನ,
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ
ಮಲ್ಲೇಶ್ವರಂ, ಬೆಂಗಳೂರು 560 003.

*******

# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 31.01.2018 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಹಾಗೂ ಮುಂದುವರಿಕೆಯಾಗಿ ದಿನಾಂಕ 20.02.2018 ರಂದು ಅಪರಾಹ್ನ ಗಂಟೆ 2.30ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

## ಪ್ರಾರಂಭಿಕ

1. ಮಾನ್ಯ ಕುಲಪತಿಯವರು, ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗೆ ಸಾರ್ವಜನಿಕ ಶಿಕ್ಷಣ ಆಯುಕ್ತರ ನೆಲೆಯಲ್ಲಿ ಹಾಜರಾಗುತ್ತಿರುವ ಶ್ರೀ ಟಿ.ನಾರಾಯಣ ಗೌಡ, ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾನಿಲಯ, ಮಂಗಳೂರು ಇವರ ಪರಿಚಯವನ್ನು ಸಭೆಗೆ ನೀಡಿ ಸ್ವಾಗತಿಸಿದರು.

2. ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಿಗೆ ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ ಹಾಜರಾಗುತ್ತಿದ್ದ ಶ್ರೀ ಹೆಚ್. ದಿವಾಕರ ಶೆಟ್ಟಿ, ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ ಇವರನ್ನು ಸಿಂಡಿಕೇಟು ಸದಸ್ಯತ್ವದಿಂದ ಬಿಡುಗಡೆಗೊಳಿಸಲಾದ ವಿಷಯವನ್ನು ಸಿಂಡಿಕೇಟು ಸಭೆಗೆ ತಿಳಿಸಿ ಸದರಿ ಅವಧಿಯಲ್ಲಿ ಅವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ದಾಖಲಿಸಲಾಯಿತು.

## ಪ್ರಸ್ತಾವನೆ

1. ವಿವಿಧ ಅಧ್ಯಯನ ಪೀಠಗಳ ಕಾರ್ಯಚಟುವಟಿಕೆಗಳನ್ನು ನಿಗಾವಹಿಸಿ ಪೀಠಗಳು ಸತತವಾಗಿ ಚಟುವಟಿಕೆಗಳನ್ನು ನಡೆಸಲು ಸಹಕರಿಸುವಂತೆ ಶ್ರೀ ಪ್ರಭಾಕರ್, ಉಪಕುಲಸಚಿವರು ಮತ್ತು ಎಸ್ಟೇಟ್ ಅಧಿಕಾರಿ (ರೆವೆನ್ಯೂ) ಇವರನ್ನು ಸಂಯೋಜಕರಾಗಿ ನೇಮಿಸಲು ನಿರ್ಣಯಿಸಲಾಯಿತು.

2. ನೆಲ್ಯಾಡಿಯಲ್ಲಿ ಪ್ರಾರಂಭವಾಗಲಿರುವ ವಿಶ್ವವಿದ್ಯಾನಿಲಯದ ಘಟಕ ಕಾಲೇಜಿನ ಕಾಮಗಾರಿಯನ್ನು ಆರಂಭಿಸುವ ಸಂಬಂಧ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ಕನಿಷ್ಠ ರೂ.20.00 ಕೋಟಿ ಸರಕಾರದಿಂದ ಅನುದಾನವನ್ನು ಬಿಡುಗಡೆಗೊಳಿಸುವಂತೆ ಮನವಿ ಸಲ್ಲಿಸಲು ಅನುಕೂಲವಾಗುವಂತೆ ಶ್ರೀ ವಿಜಯ ಕುಮಾರ್ ಸೊರಕೆ, ಸಿಂಡಿಕೇಟು ಸದಸ್ಯರು ಹಾಗೂ ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಸದಸ್ಯರ ಜೊತೆ ಮಾನ್ಯ ಕುಲಪತಿಯವರು ತೆರಳಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

3. ಅ) ಮಾನ್ಯ ಸದಸ್ಯರಾದ ಹರೀಶ್ ಆಚಾರ್‌ರವರ ಪ್ರಸ್ತಾವನೆ ಚರ್ಚಿಸುತ್ತಾ ಸ್ನಾತಕೋತ್ತರ ಇತಿಹಾಸ ವಿಭಾಗದ 30ರಲ್ಲಿ 20 ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳು ಮರುಮೌಲ್ಯಮಾಪನಕ್ಕೆ ಬಂದಿರುವುದರಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಇಂತಹ ಪ್ರಕರಣಗಳು ಪದೇ ಪದೇ ನಡೆಯದಂತೆ ಕ್ರಮಕೈಗೊಳ್ಳಲು ಕುಲಸಚಿವರು (ಪರೀಕ್ಷಾಂಗ) ಇವರಿಗೆ ವಿವರ ಕೊಡಲು ತಿಳಿಸಲಾಯಿತು.

   ಆ) ಪಿ.ಎಚ್‌ಡಿ. ಪ್ರವೇಶಾತಿಯಲ್ಲಿ ಸ್ಥಳೀಯ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ಕೊಡಲು ಸ್ನಾತಕೋತ್ತರ ಕೋರ್ಸುಗಳ ಪ್ರವೇಶದ ಮಾದರಿಯಂತೆ 1:12 ಅನುಪಾತದಲ್ಲಿ ಸ್ಥಳೀಯ ಮತ್ತು ಅನ್ಯ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಲು ನಿರ್ಧರಿಸಲಾಯಿತು.

4. ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿಗೆ ಬರುವ ಆಹ್ವಾನಿತರು ಹಾಗೂ ಪರೀಕ್ಷಕರಿಗೆ ಅನುವಾಗುವಂತೆ ಪ್ರಾಂಶುಪಾಲರ ವಸತಿನಿಲಯವನ್ನು ಅತಿಥಿಗೃಹವನ್ನಾಗಿ ಪರಿವರ್ತಿಸಲು ನಿರ್ಧರಿಸಲಾಯಿತು.

**I ನಡಾವಳಿಗಳ ದೃಢೀಕರಣ**

1. ದಿನಾಂಕ 27.12.2017ರಂದು ನಡೆದ ಸಿಂಡಿಕೇಟಿನ 2017ನೇ ಸಾಲಿನ ಎಂಟನೆಯ ಸಾಮಾನ್ಯ ಸಭೆಯ ನಡಾವಳಿಯನ್ನು ಈ ಕೆಳಗಿನಂತೆ ತಿದ್ದುಪಡಿಮಾಡಿ ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ: ಸಾ.ಸ.8:3(2017)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟಿನಿಂದ ಅನುಮೋದನೆಗೊಂಡು ಪ್ರಸ್ತುತ ಜಾರಿಯಲ್ಲಿರುವ ವಕೀಲರ ಯಾದಿಯನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ:** ದಿನಾಂಕ 14.01.2018 ರಿಂದ ಅನ್ವಯವಾಗುವಂತೆ ಮುಂದಿನ 3 ವರ್ಷದ ಅವಧಿಯವರೆಗೆ ಪ್ರಸ್ತುತ ಚಾಲ್ತಿಯಲ್ಲಿರುವ ದರ, ಇತರ ಷರತ್ತು ಹಾಗೂ ನಿಬಂಧನೆಗಳಿಗೊಳಪಟ್ಟು ಮುಂದುವರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಅಲ್ಲದೆ ಮಾನ್ಯ ಸದಸ್ಯರು ಸೂಚಿಸಿರುವ ಇತರೆ ಹೆಸರುಗಳನ್ನು ಪ್ರಸ್ತುತ ಇರುವ ಯಾದಿಗೆ ಸೇರಿಸಿ ಪಟ್ಟಿಯನ್ನು ಅನುಮೋದಿಸಲಾಯಿತು. ಅವರುಗಳು :

1. ಶ್ರೀ ಉದಯಾನಂದ ಎ.
2. ಶ್ರೀ ದಿನೇಶ್ ಹೆಗ್ಡೆ. ಉಲ್ಲೈಪಾಡಿ
3. ಶ್ರೀ ಎಮ್.ವಿ.ಶಂಕರ್ ಭಟ್, ಮಂಗಳೂರು
4. ಶ್ರೀ ಅರುಣ್ ಶ್ಯಾಮ್ .ಎಮ್.

**II ಅನುಸರಣಾ ವರದಿಯ ಅನುಮೋದನೆ**

1. ದಿನಾಂಕ 05.12.2017ರಂದು ನಡೆದ ಸಿಂಡಿಕೇಟಿನ 2017ನೇ ಸಾಲಿನ ಏಳನೆಯ ಸಾಮಾನ್ಯ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ : ಸಿಂಡಿಕೇಟು** ಸಾ.ಸ1:1(2018)

**ವಿಷಯ:** ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಆಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ : ಸಿಂಡಿಕೇಟು** ಸಾ.ಸ1:2(2018)

**ವಿಷಯ:** ಪದವಿಮಟ್ಟದ ಎಫ್.ಎನ್.ಡಿ. ಹಾಗೂ ಸ್ನಾತಕೋತ್ತರ ಫುಡ್ ಸಾಯನ್ಸ್ ಆ್ಯಂಡ್ ನ್ಯೂಟ್ರಿಷನ್ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಆಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ : ಸಿಂಡಿಕೇಟು** ಸಾ.ಸ1:3(2018)

**ವಿಷಯ:** ಪದವಿ ಮತ್ತು ಸ್ನಾತಕೋತ್ತರ ಟ್ರಾವೆಲ್ ಆ್ಯಂಡ್ ಟೂರಿಸಂ ಮ್ಯಾನೇಜ್‌ಮೆಂಟ್, ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್ ಹಾಗೂ ಪಿಜಿಡಿಟಿಹೆಚ್‌ಎಂ (ಸ್ನಾತಕೋತ್ತರ ಡಿಪ್ಲೋಮಾ ಇನ್ ಟೂರಿಸಂ ಆ್ಯಂಡ್ ಹೋಟೆಲ್ ಮ್ಯಾನೇಜ್‌ಮೆಂಟ್) ಮತ್ತು ಏವಿಯೇಶನ್ ಮತ್ತು ಹಾಸ್ಪಿಟಾಲಿಟಿ ಮ್ಯಾನೇಜ್‌ಮೆಂಟ್ (ಸರ್ಟಿಫಿಕೇಟ್/ಡಿಪ್ಲೋಮಾ ಕೋರ್ಸ್) ಸಂಯುಕ್ತ ಅಧ್ಯಯನ ಮಂಡಳಿಯ ಪುನರ್‌ರಚನೆಯ ಬಗ್ಗೆ.

**ನಿರ್ಣಯ:** ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ : ಸಿಂಡಿಕೇಟು** ಸಾ.ಸ1:4(2018)

**ವಿಷಯ:** ಪದವಿಮಟ್ಟದ ಮಲೆಯಾಳಂ, ತಮಿಳು, ತೆಲುಗು, ಉರ್ದು, ಅರೇಬಿಕ್ ಮತ್ತು ಮಣಿಪುರಿ ಭಾಷಾ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್‌ರಚನೆಯ ಬಗ್ಗೆ.

**ನಿರ್ಣಯ:** ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ : ಸಿಂಡಿಕೇಟು** ಸಾ.ಸ1:5(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇತಿಹಾಸ ಅಧ್ಯಯ ವಿಭಾಗದ ಅಧ್ಯಕ್ಷರ ನೇಮಕಾತಿ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಆಡಳಿತ** ಸಾ.ಸ 1:6(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನಾ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ತುಟ್ಟಿಭತ್ಯೆಯನ್ನು ಪಾವತಿಸುವ ಬಗ್ಗೆ.

**ನಿರ್ಣಯ:** ರಾಷ್ಟ್ರೀಯ ಸೇವಾ ಯೋಜನಾ ಸಲಹಾ ಸಮಿತಿಯ ಶಿಫಾರಸ್ಸಿನಂತೆ ಸದರಿ ಸಿಬ್ಬಂದಿಗಳ ತುಟ್ಟಿಭತ್ಯೆಯನ್ನು ರಾಷ್ಟ್ರೀಯ ಸೇವಾ ಯೋಜನಾ ಸಂಪನ್ಮೂಲ ನಿಧಿಯಿಂದ ಭರಿಸುವ ಷರತ್ತಿನ ಮೇರೆಗೆ ಪಾವತಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಎಸಿಸಿ** ಸಾ.ಸ 1:7(2018)

**ವಿಷಯ:** ಸ್ವಾಯತ್ತ ಕಾಲೇಜುಗಳ ಸ್ವಾಯತ್ತತೆಯನ್ನು ಮುಂದುವರಿಸುವ ಬಗ್ಗೆ.

**ನಿರ್ಣಯ:** ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ1:8(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವತಿಯಿಂದ ಸರಕಾರಿ ಪದವಿ ಪೂರ್ವ ಕಾಲೇಜು ಮುಡಿಪು ಇಲ್ಲಿಗೆ ವಿಜ್ಞಾನ ಪ್ರಯೋಗಾಲಯ ನಿರ್ಮಿಸಿ ಕೊಡುವ ಬಗ್ಗೆ.

**ನಿರ್ಣಯ:** ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಉಪಯೋಗವಾಗದಿರುವ ಉಪಕರಣಗಳನ್ನು ಗುರುತಿಸಿ ಪಟ್ಟಿ ಮಾಡಲು ಡಾ.ಕೆ.ಎಂ.ಬಾಲಕೃಷ್ಣ, ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ ಮತ್ತು ಡಾ. ಕೆ.ಎಸ್. ಶ್ರೀಪಾದ, ಪ್ರಾಧ್ಯಾಪಕರು, ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗ ಇವರುಗಳ ಸಹಾಯ ಪಡೆದು ಸರಕಾರಿ ಪದವಿ ಪೂರ್ವ ಕಾಲೇಜು, ಮುಡಿಪು, ಇಲ್ಲಿ ವಿಜ್ಞಾನ ಪ್ರಯೋಗಾಲಯ ನಿರ್ಮಿಸಲು ನಿರ್ಧರಿಸಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ1:9(2018)

**ವಿಷಯ:** ಅಕ್ಟೋಬರ್/ನವೆಂಬರ್ 2017ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ

**ನಿರ್ಣಯ:** ವಿಶ್ವವಿದ್ಯಾನಿಲಯದ ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿ ತನಿಖೆ ನಡೆಸಿ ತಯಾರಿಸಿದ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ವರದಿಯಲ್ಲಿ ತಿಳಿಸಿದ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ1:10(2018)

**ವಿಷಯ:** ಶ್ರೀ. ಪ್ರಸನ್ನ ಕುಮಾರ್ ರೈ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು

**ನಿರ್ಣಯ:** ವಿದ್ಯುತ್ಕೋಶ ಚಾಲಿತ ವಾಹನ (Battery Operated Vehicle) ದ ಉಪಯುಕ್ತತೆ ಹಾಗೂ ಅದರ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರೊ.ವಿ.ರವೀಂದ್ರಾಚಾರಿಯವರು ಕೂಲಂಕುಷವಾಗಿ ಪರಿಶೀಲಿಸಿ ಪ್ರಸ್ತಾವನೆಯನ್ನು ಮರು ಸಲ್ಲಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ1:11(2018)

**ವಿಷಯ:** ಶ್ರೀ. ಹರೀಶ್ ಆಚಾರ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು

**ನಿರ್ಣಯ:** ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ಹರೀಶ್ ಆಚಾರ್‌ರವರ ಪ್ರಸ್ತಾವನೆಗಳನ್ನು ಒಂದೊಂದಾಗಿ ಪರಿಶೀಲಿಸಲಾಗಿ ಈ ಕೆಳಗಿನಂತೆ ನಿರ್ಣಯಿಸಲಾಯಿತು.

ಪ್ರಸ್ತಾವನೆ ಕ್ರ.ಸಂ.1ಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಮತ್ತು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು, ಮಡಿಕೇರಿ ಘಟಕ ಕಾಲೇಜುಗಳ ಹೆಸರುಗಳನ್ನು ಬದಲಾಯಿಸುವ ಪ್ರಸ್ತಾವನೆಯನ್ನು ತಜ್ಞರ ಸಮಿತಿ ಮುಂದೆ ಇಡಲಾಗಿದೆ ಎಂದು ತಿಳಿಸಲಾಯಿತು.

ಪ್ರಸ್ತಾವನೆ ಕ್ರ.ಸಂ.2,3&4ಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವೃಂದ ಬಲವನ್ನು ಹೆಚ್ಚಿಸುವ ಸಲುವಾಗಿ ಅನುಶಾಸನಗಳನ್ನು ತಯಾರಿಸಿ ಸರಕಾರಕ್ಕೆ ಈಗಾಗಲೇ ಕಳುಹಿಸಲಾಗಿದೆ ಎಂದು ಸದಸ್ಯರ ಗಮನಕ್ಕೆ ತರಲಾಯಿತು.

ಪ್ರಸ್ತಾವನೆ ಕ್ರ.ಸಂ.5 ಕ್ಕೆ ಸಂಬಂಧಿಸಿದಂತೆ, ಮಂಗಳೂರು ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆ ನಡೆಸುವ ಬಗ್ಗೆ ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

ಪ್ರಸ್ತಾವನೆ ಕ್ರ.ಸಂ.6ಕ್ಕೆ ಸಂಬಂಧಿಸಿದಂತೆ, ಅಧಿಸೂಚನೆ ಸಂ.MU/9/EST (1) 2001-2002 ದಿನಾಂಕ 19.09.2002ರಂತೆ ವಿಶ್ವವಿದ್ಯಾನಿಲಯದ ಖಾಲಿ ಇರುವ ಕೆಲವು ಅಧ್ಯಾಪಕರ ಹುದ್ದೆಗಳಿಗೆ ನಡೆದ ನೇರ ನೇಮಕಾತಿಯಲ್ಲಿ ಅಕ್ರಮಗಳು ನಡೆದಿರುವ ಬಗ್ಗೆ ಮಂಡಿಸಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸಿಂಡಿಕೇಟ್ ಸದಸ್ಯರಾದ ಶ್ರೀ ಹರೀಶ್ ಆಚಾರ್‌ರವರು ಕೆಲವೊಂದು ದಾಖಲೆಗಳನ್ನು ಸಭೆಯಲ್ಲಿ ಮಂಡಿಸಿದರು. ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ ಅರ್ಥಶಾಸ್ತ್ರ ವಿಭಾಗದಲ್ಲಿ ಆಯ್ಕೆಯಾಗಿರುವ ಪ್ರಾಧ್ಯಾಪಕರೊರ್ವರಿಗೆ ಕೇವಲ ಎಂಟು ವರ್ಷಗಳ ಪೂರ್ಣಕಾಲಿಕ ಬೋಧನಾ ಅನುಭವ ಮಾತ್ರವೇ ಇರುತ್ತದೆ. ಮಾತ್ರವಲ್ಲದೆ ಸದರಿ ಪ್ರಾಧ್ಯಾಪಕರು 28.12.1999ರಲ್ಲಿ ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದು ಸಂಶೋಧನಾ ಮಾರ್ಗದರ್ಶಕರಾಗಿ ಆಯ್ಕೆಯಾಗ ಬೇಕಾದರೆ ಪಿ.ಹೆಚ್.ಡಿ. ಪದವಿಯನ್ನು ಹೊಂದಿ ಕನಿಷ್ಠ ಮೂರು ವರ್ಷಗಳಾದರೂ ಆಗ ಬೇಕಾಗುತ್ತದೆ. ಆದರೆ ಸದರಿಯವರು ನೇರನೇಮಕಾತಿ ಅಧಿಸೂಚನೆಯಂತೆ ಅರ್ಜಿ ಸಲ್ಲಿಸುವಾಗ ಸುಮಾರು 4 ಜನ ಸಂಶೋಧನಾ ವಿದ್ಯಾರ್ಥಿಗಳು ನೋಂದಾವಣೆಗೊಂಡಿರುವ ಬಗ್ಗೆ ದಾಖಲೆಗಳಲ್ಲಿ ಕಂಡುಬರುತ್ತದೆ. ಮಾತ್ರವಲ್ಲದೇ ಪ್ರಾಧ್ಯಾಪಕ ಹುದ್ದೆಗಳಿಗೆ ಅರ್ಹತೆಯನ್ನು ಪಡೆಯಬೇಕಾದರೆ ಸದರಿಯವರ ಅಡಿಯಲ್ಲಿ ಕನಿಷ್ಠ ಒಬ್ಬ ವಿದ್ಯಾರ್ಥಿಯಾದರೂ ಸಂಶೋಧನಾ ಕಾರ್ಯ ಮುಗಿಸಿರಬೇಕಾಗುತ್ತದೆ. ಆದುದರಿಂದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ನೇರ

ನೇಮಕಾತಿಯಲ್ಲಿ ಅಕ್ರಮಗಳು ನಡೆದಿರುವುದು ದಾಖಲೆಗಳ ಆಧಾರದಲ್ಲಿ ಕಂಡುಬರುತ್ತಿದೆ ಎಂದು ಇತರ ಸದಸ್ಯರುಗಳು ಕೂಡ ಅಭಿಪ್ರಾಯ ಪಟ್ಟಿರುತ್ತಾರೆ. ಈ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವರೇ ಪ್ರಕರಣದ ಗಂಭೀರತೆಯನ್ನು ಅರಿತು ಮತ್ತು ಪ್ರಕರಣ ಹಳೆಯದಾಗಿರುವ ಹಿನ್ನಲೆಯಲ್ಲಿ ರಾಜ್ಯ ಸರಕಾರ ಮತ್ತು ಗೌರವಾನ್ವಿತ ರಾಜ್ಯಪಾಲರಿಗೆ ದಾಖಲೆಗಳೊಂದಿಗೆ ವಿವರವಾದ ವರದಿಯನ್ನು ಸಲ್ಲಿಸಲು ಮಾನ್ಯ ಸದಸ್ಯರು ವಿಶ್ವವಿದ್ಯಾನಿಲಯದ ಆಡಳಿತ ವರ್ಗಕ್ಕೆ ತಿಳಿಸಿದರು.

**ಕಾರ್ಯಸೂಚಿ ಸಂಖ್ಯೆ :** ಹಣಕಾಸು ವಿಭಾಗ ಸಾ.ಸ1:12(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2018–19ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2017–18ನೇ ಸಾಲಿನ ಪರಿಷ್ಕೃತ ಆಯವ್ಯಯ ಅಂದಾಜುಗಳ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಹಣಕಾಸು ವಿಭಾಗ ಸಾ.ಸ1:13(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2014–15ನೇ ಸಾಲಿನ ಲೆಕ್ಕ ಪರಿಶೋಧನ ವರದಿ – ಅನುಸರಣಾ ವರದಿಯ ಅನುಮೋದನೆ ಕುರಿತು.

**ನಿರ್ಣಯ:** ದಿನಾಂಕ 12.01.2018ರಂದು ನಡೆದ ಹಣಕಾಸು ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾ.ಸ1:14(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ1:15(2018)

**ವಿಷಯ:** ಇಸಿಆರ್ ಇನ್‌ಸ್ಟಿಟ್ಯೂಟ್ ಆಫ್ ಮೆನೇಜೆಮೆಂಟ್ ಸ್ಟಡೀಸ್, ಕೋಟೇಶ್ವರ ಎಂಬ ವಿದ್ಯಾಸಂಸ್ಥೆಯಲ್ಲಿ 'ಏವಿಯೇಶನ್ ಆ್ಯಂಡ್ ಹಾಸ್ಪಿಟಾಲಿಟಿ ಮೇನೇಜ್‌ಮೆಂಟ್' ಕೋರ್ಸಿಗೆ ಹೆಚ್ಚುವರಿ ಪ್ರವೇಶಾತಿ ಮಾಡಿರುವ ಬಗ್ಗೆ.

**ನಿರ್ಣಯ:** ಸದರಿಯವರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸುತ್ತಾ ವಿಶ್ವವಿದ್ಯಾನಿಲಯವು ವಿಧಿಸಿದ ದಂಡವನ್ನು ಕೈಬಿಡಲು ಸಾಧ್ಯವಿಲ್ಲವೆಂದು ತಿಳಿಸಲು ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ 1:16(2018)

**ವಿಷಯ:** ಸ್ಥಳೀಯ ವಿಚಾರಣಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಭತ್ಯೆ ನೀಡುವ ಬಗ್ಗೆ.

**ನಿರ್ಣಯ:** ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ತಲಾ ರೂ.600/– ಮತ್ತು ಸಹಕರಿಸುವ ಸಿಬ್ಬಂದಿಗೆ ರೂ.300/– ಹಾಗೂ ಊಟೋಪಚಾರ ವೆಚ್ಚಕ್ಕಾಗಿ ಪ್ರತೀ ತಂಡಕ್ಕೆ ರೂ.1,200/– ಅನ್ನು ಮಂಜೂರು ಮಾಡುವುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾ.ಸ 1:17(2018)

**ವಿಷಯ:** ದಿನಾಂಕ 30.10.2017ರಂದು ನಡೆದ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಯ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ 1:18(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಆಂಗ್ಲ ಅಧ್ಯಯನ ವಿಭಾಗದ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ದಿನಾಂಕ 01.03.2018ರಿಂದ ದಿನಾಂಕ 30.06.2018ರ ವರೆಗೆ ಪ್ರೊ.ಡಿ.ಆರ್.ಶಶಿಧರ್ ಇವರನ್ನು ಸ್ನಾತಕೋತ್ತರ ಆಂಗ್ಲ ಅಧ್ಯಯನ ವಿಭಾಗದ ಪ್ರಭಾರ ಅಧ್ಯಕ್ಷರನ್ನಾಗಿ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ1:19(2018)

**ವಿಷಯ:** ಸಿಂಡಿಕೇಟು ಸಭೆಯ ಪ್ರಸ್ತಾವನೆಯಲ್ಲಿ ಸೂಚಿಸಿದಂತೆ ಡಾ.ಪಾರ್ವತಿ ಅಪ್ಪಯ್ಯ, ಪ್ರಾಂಶುಪಾಲರು, ಫೀ.ಮಾ.ಕೆ.ಎಂ.ಕಾ.ಕಾಲೇಜು, ಮಡಿಕೇರಿ ಇವರ ವಿರುದ್ಧ ಇರುವ ದೂರುಗಳ ವಿವರ ನೀಡುವ ಬಗ್ಗೆ.

**ನಿರ್ಣಯ:** ಡಾ.ಪಾರ್ವತಿ ಅಪ್ಪಯ್ಯ ರವರ ವಿರುದ್ಧ ಇರುವ ದೂರುಗಳ ಪಟ್ಟಿಯನ್ನು ಪರಿಶೀಲಿಸಿ ಕಡತಗಳಿಮದ ಹೆಚ್ಚಿನ ಮಾಹಿತಿ ಪಡೆದು ದೋಷಾರೋಪಣ ಪಟ್ಟಿಯನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ತಿಳಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ1:20(2018)

**ವಿಷಯ:** DST-PURSE ಪ್ರಯೋಗಾಲಯದಲ್ಲಿರುವ ∑IGMA Field Emission Scanning Electron Microscope with Accessories ಫೀಸೆಮ್ ಉಪಕರಣದ ಬಿಡಿಭಾಗಗಳ ಖರೀದಿ ಪ್ರಸ್ತಾವನೆ ಮಂಜೂರಾತಿ ಬಗ್ಗೆ.

**ನಿರ್ಣಯ:** ದಿನಾಂಕ 30.01.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಸದರಿ ಉಪಕರಣವನ್ನು €10,817.00+ಇತರ ಖರ್ಚು ವೆಚ್ಚಗಳೊಂದಿಗೆ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಡಿಇವಿ** ಸಾ.ಸ1:21(2018)

**ವಿಷಯ:** BRNS Project, CARRT – Semi Automatic Cryostat ಉಪಕರಣ ಖರೀದಿಗೆ ಸಂಬಂಧಿಸಿದ ಪ್ರಸ್ತಾವನೆ ಮಂಜೂರಾತಿ ಬಗ್ಗೆ.

**ನಿರ್ಣಯ:** ದಿನಾಂಕ 30.01.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಸದರಿ ಉಪಕರಣವನ್ನು ರೂ.4,99,520.00 ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಡಿಇವಿ** ಸಾ.ಸ1:22(2018)

**ವಿಷಯ:** CARER – Lund University, Sweden ಜೊತೆ ಜಂಟಿ ಸಂಶೋಧನೆ ಕೈಗೊಳ್ಳುವುದಕ್ಕೆ ಸಂಬಂಧಿಸಿ ಒಡಂಬಡಿಕೆ (MOU) ಮಾಡಿಕೊಳ್ಳುವ ಬಗ್ಗೆ.

**ನಿರ್ಣಯ:** ಒಪ್ಪಂದವನ್ನು ವಿಶ್ವವಿದ್ಯಾನಿಲಯದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಜೊತೆ ಒಡಂಬಡಿಕೆ ಎಂದು ತಿದ್ದುಪಡಿಗೊಳಿಸಿ ಮರುಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಡಿಇವಿ** ಸಾ.ಸ1:23(2018)

**ವಿಷಯ:** ಕೊಂಕಣಿ ಅಧ್ಯಯನ ಪೀಠ ಹಾಗೂ ಕೊಂಕಣಿ ಸಾಂಸ್ಕೃತಿಕ ಪ್ರತಿಷ್ಠಾನ, ವಿಶ್ವ ಕೊಂಕಣಿ ಕೇಂದ್ರ ಮಂಗಳೂರು ಜೊತೆಗೆ "ಪರಸ್ಪರ ತಿಳಿವಳಿಕೆ ಒಪ್ಪಂದ" (MoU) ಮಾಡುವುದರ ಕುರಿತು.

**ನಿರ್ಣಯ:** ಕರಡು ಪರಸ್ಪರ ತಿಳಿವಳಿಕೆ ಒಪ್ಪಂದ (MoU) ಅನ್ನು ತಿದ್ದುಪಡಿಗಳ ಜೊತೆ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಡಿಇವಿ ಸಾ.ಸ1:24(2018)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿದ ಸ್ನಾತಕೋತ್ತರ ವಿಭಾಗಗಳು/ಕೋರ್ಸ್‌ಗಳು/ಕೇಂದ್ರಗಳು/ಘಟಕ ಕಾಲೇಜುಗಳಿಗೆ ಅಗತ್ಯವಿರುವ ಯುಪಿಯಸ್ ಮತ್ತು ಬ್ಯಾಟರಿಗಳನ್ನು ಧಾರಣಾಗುತ್ತಿಗೆ ದರ ನಿಗದಿಪಡಿಸಿ ಖರೀದಿಸುವ ಬಗ್ಗೆ.

**ನಿರ್ಣಯ:** ದಿನಾಂಕ 31.01.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಮುಂದಿನ ಒಂದು ವರ್ಷದ ಅವಧಿಗೆ ಧಾರಣಾಗುತ್ತಿಗೆ ದರದಲ್ಲಿ ಸದರಿ ಉಪಕರಣಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಡಿಇವಿ ಸಾ.ಸ1:25(2018)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳು ಕೋರ್ಸ್‌ಗಳು/ಕೇಂದ್ರಗಳು/ಘಟಕ ಕಾಲೇಜುಗಳಿಗೆ ಅಗತ್ಯವಿರುವ ಪ್ರೊಜೆಕ್ಟರ್ ಮತ್ತು Interactive Class Room ಉಪಕರಣಗಳನ್ನು ಧಾರಣಾಗುತ್ತಿಗೆ ದರ ನಿಗದಿಪಡಿಸಿ, ಖರೀದಿಸುವ ಬಗ್ಗೆ.

**ನಿರ್ಣಯ:** ದಿನಾಂಕ 31.01.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಮುಂದಿನ ಒಂದು ವರ್ಷದ ಅವಧಿಗೆ ಧಾರಣಾಗುತ್ತಿಗೆ ದರದಲ್ಲಿ ಸದರಿ ಉಪಕರಣಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಡಿಇವಿ ಸಾ.ಸ1:26(2018)**

**ವಿಷಯ:** DST-FIST - ಸಾಗರ ಭೂ ವಿಜ್ಞಾನ ವಿಭಾಗ ಉಪಕರಣ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 30.01.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಸದರಿ ಉಪಕರಣವನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಡಿಇವಿ ಸಾ.ಸ1:27(2018)**

**ವಿಷಯ:** UGC-SAP, ಜೀವ ವಿಜ್ಞಾನ ವಿಭಾಗ – ಉಪಕರಣದ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 30.01.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಸದರಿ ಉಪಕರಣವನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಡಿಇವಿ ಸಾ.ಸ1:28(2018)**

**ವಿಷಯ:** DST-FIST, ಜೀವ ವಿಜ್ಞಾನ ವಿಭಾಗ – ಉಪಕರಣದ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 30.01.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಸದರಿ ಉಪಕರಣವನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಡಿಇವಿ ಸಾ.ಸ1:29(2018)**

**ವಿಷಯ:** Science, Technology & Management Conclave 2018 at Sahyadri College of Engineering & Management ಸಮ್ಮೇಳನಕ್ಕೆ ಅನುದಾನ ನೀಡುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ Conclave 2018 ಸಮ್ಮೇಳನವು ನಡೆದಿರುವುದರಿಂದ ರೂ.5.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡುವುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಆಡಳಿತ ಸಾ.ಸ1:30(2018)**

**ವಿಷಯ:** 2017–18ನೇ ಸಾಲಿಗೆ ಕಂಪ್ಯೂಟರ್ ಸ್ಟೇಶನರಿ (ಲೇಸರ್ ಜೆಟ್ ಟೋನರ್ ಮತ್ತು ಇಂಕ್ ಜೆಟ್ ಕಾಟ್ರೇಡ್ಜ್) ಖರೀದಿಸಲು ಧಾರಣಾ ಗುತ್ತಿಗೆದಾರರನ್ನು ನಿಗದಿಗೊಳಿಸುವ ಬಗ್ಗೆ.

**ನಿರ್ಣಯ:** ದಿನಾಂಕ 30.01.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸಿನಂತೆ ಸದರಿ ಉಪಕರಣವನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಎಸಿಸಿ ಸಾ.ಸ1:31(2018)**

**ವಿಷಯ:** Submission of Synopsis by Prof. Undurti N Das, Biosciences Research Centre (BSRC)Visakhapatnam for the award of D.Sc. degree by Mangalore University.

**ನಿರ್ಣಯ:** ಈ ವಿಷಯವನ್ನು ಜೈವಿಕ ವಿಜ್ಞಾನ ವಿಭಾಗದಡಿ ಗುರುತಿಸಿ ಮುಂದಿನ ಕ್ರಮ ತೆಗೆದುಕೊಳ್ಳಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ.1:32(2018)

**ವಿಷಯ:** 2018ನೇ ವರ್ಷದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯ ಪರೀಕ್ಷೆಗಳನ್ನು ನಡೆಸಲು ರಚನೆಯಾದ ಪರೀಕ್ಷಕರ ಮಂಡಳಿಯ ಅನುಮೋದನೆ ಕುರಿತು.

**ನಿರ್ಣಯ:** ಪರೀಕ್ಷಕರ ನೇಮಕಾತಿ ಮಂಡಳಿ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ.1:33(2018)

**ವಿಷಯ:** ಅಕ್ಟೋಬರ್/ನವೆಂಬರ್ 2017ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಯ ಬಗ್ಗೆ ತನಿಖಾ ವರದಿ.

**ನಿರ್ಣಯ:** ವಿಶ್ವವಿದ್ಯಾನಿಲಯದ ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿ ತನಿಖೆ ನಡೆಸಿ ತಯಾರಿಸಿದ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ವರದಿಯಲ್ಲಿ ತಿಳಿಸಿದ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ.1:34(2018)

**ವಿಷಯ:** ಪದವಿ ಮತ್ತು ಸ್ನಾತಕೋತ್ತರ ಇಲೆಕ್ಟ್ರಾನಿಕ್ಸ್ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡೀಡವಿ ಸಾ.ಸ.1:35(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ "MCJ Silver Jubilee Year Cas Prize/s" ನಗದು ಬಹುಮಾನ ದತ್ತಿನಿಧಿ ಸ್ಥಾಪನೆ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡೀಡವಿ ಸಾ.ಸ.1:36(2018)

**ವಿಷಯ:** IQAC ಸಭೆಯ ನಡಾವಳಿ ಹಾಗೂ 2015–16ರ AQAR ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.1:37(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಮಂಗಳಗಂಗೋತ್ರಿ ಆವರಣದಲ್ಲಿ ಹೊರಾಂಗಣ ಕ್ರೀಡಾಂಗಣ (ಆಟದ ಮೈದಾನ) ನಿರ್ಮಾಣ ಕಾಮಗಾರಿ – ಪರಿಷ್ಕೃತ ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.1:38(2018)

**ವಿಷಯ:** Construction of Outdoor Stadium (Play Ground) for Mangalore University, Mangalagangothri – ಕಾಲಾವಧಿ ವಿಸ್ತರಣೆ

**ನಿರ್ಣಯ:** ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.1:39(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಮುಖ್ಯ ರಸ್ತೆಗಳ ಅಭಿವೃದ್ಧಿ – ಕಾಲಾವಧಿ ವಿಸ್ತರಣೆ.

**ನಿರ್ಣಯ:** ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.1:40(2018)

**ವಿಷಯ:** Prevention of Water leakage in Boys Hostel Dining block at Mangalore University Campus, Mangalagangothri – Revised Estimate for approval.

ಪರಿಷ್ಕೃತ ಅಂದಾಜು ಪಟ್ಟಿ ಮೊತ್ತ ರೂ. 22,19,632.91

**ನಿರ್ಣಯ:** ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.1:41(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಅಡಿಟೋರಿಯಂ ಕಟ್ಟಡದ ವೇದಿಕೆಗೆ ಮರದ ನೆಲಹಾಸು wooden flooring ಮಾಡುವ ಕಾಮಗಾರಿಯ ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

ಅಂದಾಜುಪಟ್ಟಿ ಮೊತ್ತ ರೂ. 35,00,000.00

**ನಿರ್ಣಯ:** ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.1:42(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ International House ಕಟ್ಟಡದ ಸಮೀಪದಲ್ಲಿ Dining Hall ಕಟ್ಟಡ ನಿರ್ಮಾಣ ಕಾಮಗಾರಿ ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

ಅಂದಾಜುಪಟ್ಟಿ ಮೊತ್ತ ರೂ. 4,07,00,000.00

**ನಿರ್ಣಯ:** ಅಂದಾಜು ಪಟ್ಟಿಯನ್ನು ಪುನರ್‌ಪರಿಶೀಲಿಸಿ ಮರು ಸಲ್ಲಿಸಲು ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ.1:43(2018)

**ವಿಷಯ:** Renovation of Yakshagana Hall at Mangalore University Campus Mangalagangothri – ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

ಅಂದಾಜುಪಟ್ಟಿ ಮೊತ್ತ ರೂ. 1,36,61,711.36

**ನಿರ್ಣಯ:** ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.1:44(2018)

ವಿಷಯ: Providing Gates at Public Road and University Campus road junctions with security booth at Mangalore University Campus ಹೆಚ್ಚುವರಿ ಪರಿಮಾಣಗಳ ಅನುಮೋದನೆ ಬಗ್ಗೆ.

ನಿರ್ಣಯ: ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.1:45(2018)

ವಿಷಯ: Construction of Boys hostel (G.F) for Jnana Kaveri P.G Centre chikka Aluvara Kodagu Dist- ಕಾಮಗಾರಿಯ ಪರಿಷ್ಕೃತ ಅಂದಾಜುಪಟ್ಟಿಗೆ ಅನುಮೋದನೆ ಪಡೆಯುವ ಬಗ್ಗೆ.

ನಿರ್ಣಯ: ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.1:46(2018)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕೊಳಪಟ್ಟ ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರದಲ್ಲಿ ಪುರುಷರ ವಸತಿ ನಿಲಯ ಭೋಜನಾಲಯ ಕಟ್ಟಡದ ಬಾಕಿ ಉಳಿದ ಕಾಮಗಾರಿ – ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

ಅಂದಾಜುಪಟ್ಟಿ ಮೊತ್ತ ರೂ. 55,00,000.00

ನಿರ್ಣಯ: ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.1:47(2018)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಅಧೀನಕ್ಕೊಳಪಟ್ಟ ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಇಲ್ಲಿ ನಿರ್ಮಾಣಗೊಳ್ಳುತ್ತಿರುವ ಕಲಾ ಮತ್ತು ವಾಣಿಜ್ಯ ವಿಭಾಗ ಕಟ್ಟಡದ (ಉತ್ತರ ಭಾಗ) ಇದರ ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಐಟಂಗಳಿಗೆ ಅನುಮೋದನೆ ಪಡೆಯುವ ಬಗ್ಗೆ.

ನಿರ್ಣಯ: ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.1:48(2018)

ವಿಷಯ: Construction of Decorative Compound Wall and Approach Road to the newly constructed Mangala Auditorium at Mangalore University Campus, Mngalagangothri- Balance Work- ಕಾಲಾವಧಿ ವಿಸ್ತರಣೆ

ನಿರ್ಣಯ: ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.1:49(2018)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಯಕ್ಷಗಾನ ಕಲಾ ಮಂದಿರದ ಬಳಿಯಲ್ಲಿ ಅಣೆಕಟ್ಟು (Check Dam) ನಿರ್ಮಿಸುವುದು – ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

ಅಂದಾಜು ಮೊತ್ತ ರೂ. 20,00,000.00

ನಿರ್ಣಯ: ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.1:50(2018)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಅಧೀನಕ್ಕೊಳಪಟ್ಟ ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಇಲ್ಲಿ ನಿರ್ಮಾಣಗೊಳ್ಳುತ್ತಿರುವ ವಿಜ್ಞಾನ ವಿಭಾಗ ಕಟ್ಟಡದ (ಉತ್ತರ ಭಾಗ) ಇದರ ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಐಟಂಗಳಿಗೆ ಅನುಮೋದನೆ ಪಡೆಯುವ ಬಗ್ಗೆ.

ನಿರ್ಣಯ: ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.1:51(2018)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರದ ಪುರುಷರ ವಸತಿನಿಲಯ ಕಟ್ಟಡದ ಮೊದಲ ಅಂತಸ್ತು ಮತ್ತು ಎರಡನೇ ಅಂತಸ್ತಿನ ನಿರ್ಮಾಣ ಕಾಮಗಾರಿಯ ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 19.02.2018ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.1:52(2018)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಫೀ.ಮಾ.ಕೆ.ಎಂ.ಕಾರ್ಯಪ್ಪ ಕಾಲೇಜು, ಮಡಿಕೇರಿ ಆವರಣದಲ್ಲಿ ತರಗತಿ ಕೊಠಡಿಗಳ ಸಂಕೀರ್ಣ ಕಟ್ಟಡದ ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

ಅಂದಾಜುಪಟ್ಟಿ ಮೊತ್ತ ರೂ. 7,75,00,000.00

**ನಿರ್ಣಯ:** ಅಂದಾಜು ಪಟ್ಟಿಯನ್ನು ಮರು ಪರಿಶೀಲಿಸಿ ರೂ.4.00 ಕೋಟಿ ಮೊತ್ತಕ್ಕೆ ಮಿತಗೊಳಿಸಿ ಮರು ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ.1:53(2018)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಜ್ಞಾನ ಕಾವೇರಿ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರದ ಮಹಿಳೆಯರ ವಸತಿನಿಲಯ ಕಟ್ಟಡದ ಮೊದಲ ಅಂತಸ್ತು ಮತ್ತು ಎರಡನೇ ಅಂತಸ್ತಿನ ನಿರ್ಮಾಣ ಕಾಮಗಾರಿಯ ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

ಅಂದಾಜುಪಟ್ಟಿ ಮೊತ್ತ ರೂ. 3,75,00,000.00

**ನಿರ್ಣಯ:** ಪ್ರಸ್ತಾವನೆಯನ್ನು ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ : ಡಿಇವಿ ಸಾ.ಸ.1:54(2018)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Central Facility on Internet of Things (IoT) ಮತ್ತು Central Facility on Cloud Based System ಸೌಲಭ್ಯ ಅಳವಡಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ನಿರ್ದೇಶಕರು, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ ಮತ್ತು ಅಧ್ಯಕ್ಷರು, ಇಲೆಕ್ಟ್ರಾನಿಕ್ಸ್ ವಿಭಾಗ ಇವರುಗಳನ್ನು ಸಂಯೋಜಕರನ್ನಾಗಿ ನೇಮಿಸಿ ಸದರಿ ಪ್ರಸ್ತಾವನೆಯನ್ನು ಕಾರ್ಯರೂಪಕ್ಕೆ ತರುವಂತೆ ಕ್ರಮಕೈಗೊಳ್ಳಲು ತಿಳಿಸಲು ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಡಿಇವಿ ಸಾ.ಸ.1:55(2018)**

**ವಿಷಯ:** VGST – CISEE ಅನುದಾನ – ಜೀವ ರಸಾಯನಶಾಸ್ತ್ರ ವಿಭಾಗ, ಜ್ಞಾನ ಕಾವೇರಿ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ – ಉಪಕರಣಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 20.02.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ : ಡಿಇವಿ ಸಾ.ಸ.1:56(2018)**

**ವಿಷಯ:** ಸಂಯೋಜಕರು, CPEPA ಪ್ರೋಗ್ರಾಂ, ಮಂಗಳೂರು ವಿಶ್ವವಿದ್ಯಾನಿಲಯ – ಉಪಕರಣಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 20.02.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಶೀಲಿಸಿ FT-NMR Spectrometer ಉಪಕರಣವನ್ನು RUSA ಅನುದಾನದಲ್ಲಿ ಹಾಗೂ Spectroflourometer ಉಪಕರಣವನ್ನು CPEPA ಅನುದಾನದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. CPEPA ಯೋಜನೆಯಲ್ಲೂ ಸಹಾ FT-NMR ಖರೀದಿಸಲು ಅನುದಾನವಿರುವುದರಿಂದ, ಸಧ್ಯದಲ್ಲಿ ಈ ಅನುದಾನದಿಂದ ಖರೀದಿಸಿ, RUSA ಅನುದಾನ ಬಿಡುಗಡೆಯಾದ ನಂತರ ಹೊಂದಾಣಿಕೆ ಮಾಡಿಕೊಳ್ಳುವುದು. ಹಾಗೂ CPEPA ಸಲಹಾ ಸಮಿತಿಯ ಸಭೆಯನ್ನು ಶೀಘ್ರದಲ್ಲಿ ಕರೆದು ಬೇರೆ ಉಪಕರಣಗಳನ್ನು ಬದಲು CPEPA ಅನುದಾನದಿಂದ ಖರೀದಿಸಲು ಅನುಮತಿ ಪಡೆದು ಸಮಿತಿಯ ಶಿಫಾರಸ್ಸನ್ನು UGCಗೆ ರವಾನಿಸುವುದು ಎಂದು ಸಭೆ ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ :** ಡೀವಿ ಸಾ.ಸ.1:57(2018)

**ವಿಷಯ:** ಸಂಖ್ಯಾಶಾಸ್ತ್ರ ವಿಭಾಗ – IBM SPSS Version 24 Software ಖರೀದಿ ಪ್ರಸ್ತಾವನೆ ಮಂಜೂರಾತಿ ಬಗ್ಗೆ.

**ನಿರ್ಣಯ:** ದಿನಾಂಕ 20.02.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡೀವಿ ಸಾ.ಸ.1:58(2018)

**ವಿಷಯ:** ಜೀವ ರಸಾಯನಶಾಸ್ತ್ರ ವಿಭಾಗ, ಜ್ಞಾನ ಕಾವೇರಿ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ – ಇಲ್ಲಿಗೆ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿದ Water purification system ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 20.02.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡೀವಿ ಸಾ.ಸ.1:59(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಸೋಲಾರ್ ಅಳವಡಿಸಿರುವುದಕ್ಕೆ ಸಂಬಂಧಿಸಿ ಕಾಲಾವಧಿ ವಿಸ್ತರಿಸುವ ಬಗ್ಗೆ.

**ನಿರ್ಣಯ:** ಸದರಿ ಪ್ರಸ್ತಾವನೆಯನ್ನು ದಂಡ ರಹಿತವಾಗಿ ಕಾಲಾವಧಿ ವಿಸ್ತರಿಸಲು ಅನುಮೋದನೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ.1:60(2018)

**ವಿಷಯ:** ಜ್ಞಾನ ಕಾವೇರಿ, ಮಂಗಳೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿಗೆ Supply Installation Commissioning of Centralized RF Based Data Network Connectivity ಅಳವಡಿಸಲು ಖರೀದಿ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

**ನಿರ್ಣಯ:** ದಿನಾಂಕ 20.02.2018ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು 15 ತಿಂಗಳ ವಾರಂಟಿಯೊಂದಿಗೆ ಅನುಮೋದಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು